ಅಧ್ಯಕ್ಷರು : ನೀವು ಎಲ್ಲವನ್ನೂ ಕೇಳುತ್ತಿದ್ದರೆ ಎಲ್ಲಾ ಶೂನ್ಯವೇಳೆಯು ತಿರಸ್ಕಾರವಾಗುತ್ತದೆ.

ಶ್ರೀ ಆರ್. ಅಶೋಕ್ : ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸುರೇಶ್‌ಗೌಡರವರೆ, ತಾವು ಕೇಳಿ.

5. ವಿಷಯ: ತುಮಕೂರು ನಾಲಾ ವಲಯಕ್ಕೆ ನೀರು ಹರಿಸುವ ಬಗ್ಗೆ.

ಶ್ರೀ ಬಿ. ಸುರೇಶ್ ಗೌಡ : ಮಾನ್ಯ ಸಭಾಧ್ಯಕ್ಷರೆ, ನಮ್ಮ ಹೇಮಾವತಿ ಡ್ಯಾಂನಿಂದ ನಮ್ಮ ತುಮಕೂರು ನಾಲೆಗೆ ನೀರನ್ನು ಬಿಡುತ್ತಿದ್ದಾರೆ. ಅಲ್ಲಿ ಒಂದು ನಾಲೆಯು ಒಡೆದು ತುಮಕೂರು ಬ್ರಾಂಚ್ ಕೆನಾಲ್ ಹತ್ತಿರ ಸಮಾರು 15 ದಿವಸಗಳ ಕಾಲ ನೀರು ಬಂದಿರುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನನ್ನದೂ calling attention ಇದೆ.

ಶ್ರೀ ಬಿ. ಸುರೇಶ್ ಗೌಡ : ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಈ ಬಗ್ಗೆ ನೀವೂ ಸಹ ಕೇಳಿಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಇದು calling attention ನಲ್ಲಿದೆ.ಈ ಬಗ್ಗೆ ವಿವರವಾದ ಉತ್ತರವನ್ನು ಈದಿನವೇ ಕೊಡುತ್ತೇನೆ.

ಶ್ರೀ ಬಿ. ಸುರೇಶ್‌ಗೌಡ : ನಾನು ಈ ಬಗ್ಗೆ ಹೇಳಿ ಮುಗಿಸಿಬಿಡುತ್ತೇನೆ. ಈಗ ನಮ್ಮ ನಾಲೆಗೆ ನೀರು 15 ದಿವಸಗಳ ಕಾಲ ಬರಬೇಕಾಗಿತ್ತು. ಒಂದು ಕಡೆಯಲ್ಲಿ ನಮ್ಮ ತುಮಕೂರು ಜಿಲ್ಲೆಯನ್ನು ಸಂಪೂರ್ಣವಾಗಿ ಬರಪೀಡಿತ ಜಿಲ್ಲೆ ಎಂದು ಈಗಾಗಲೇ ಘೋಷಣೆಯನ್ನು ಮಾಡಿದ್ದಾರೆ. ಆದರೆ ಸಮಾರು ಕೆರೆಗಳು ತುಂಬಿಲ್ಲದೇ ಇರುವುದರಿಂದ ಕುಡಿಯುವ ನೀರಿಗಾಗಿ ಹಾಹಾಕಾರವಾಗಿದೆ. ಜನಜಾನುವಾರುಗಳಿಗೂ ಸಹ ನೀರಿಲ್ಲ. ಕುಡಿಯುವ ನೀರಿನ ಪ್ರಾಜೆಕ್ಟ್‌ಗಳು ಏನಿದೇ ಅದಕ್ಕೂ ಸಹ ನಮ್ಮ ತಾಲ್ಲೂಕಿನಲ್ಲಿ ನೀರು ತುಂಬಿಲ್ಲ. ಈಗ ಅಧಿಕಾರಿಗಳು ಹೇಳುವ ಪ್ರಕಾರ ಈ ತಿಂಗಳು 13ನೇ ತಾರೀಖು ನೀರನ್ನು ನಿಲ್ಲಿಸುತ್ತೇವೆಂದು ಹೇಳಿ, ಗೊರೂರಿನ ಡ್ಯಾಂನ ಅಧಿಕಾರಿಗಳು ಹೇಳಿದ್ದಾರೆನ್ನುವಂತಹ ಮಾಹಿತಿ ಇದೆ. ಈ ಸಂದರ್ಭದಲ್ಲಿ

ಮಾನ್ಯ ಜಲಸಂಪನ್ಮೂಲ ಸಚಿವರು ನಮ್ಮ ತುಮಕೂರು ಜಿಲ್ಲೆಗೆ ಸಾಕಷ್ಟು ಯೋಜನೆಗಳ ಕೆಲಸವನ್ನು ಮಾಡಿ ಪುಣ್ಯವನ್ನು ಕಟ್ಟಿಕೊಂಡಿದ್ದಾರೆ. ಈಬಗ್ಗೆ ನಮಗೆ ಬಹಳ ಸಂತೋಷವಾಗಿದೆ. ಅದರಿಂದ ತಮಿಳುನಾಡಿಗೂ ಸಹ ನೀರು ಬಿಟ್ಟಿರುವುದರಿಂದ ಸ್ವಲ್ಪ ಡ್ಯಾಂನಲ್ಲಿ ನೀರಿಲ್ಲವೆಂದು ಹೇಳಿದ್ದಾರೆ.

ಅಧ್ಯಕ್ಷರು : ಇದು ಶೂನ್ಯ ವೇಳೆಯಾಗಿದೆ. ತಾವು ಈಗಾಗಲೇ ಪ್ರಸ್ತಾಪ ಮಾಡಿದ್ದೀರಿ ಸಾಕು.

ಶ್ರೀ ಬಿ. ಸುರೇಶ್‌ಗೌಡ : ಇನ್ನು 15 ದಿವಸಗಳ ಕಾಲ ನೀರನ್ನು ನಮ್ಮ ತುಮಕೂರು ಬ್ರಾಂಚ್ ಕೆನಾಲ್‌ಗೆ ಕೊಡಬೇಕೆಂದು ಹೇಳಿ ಮಾನ್ಯ ಸಚಿವರಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಗಮನಸೆಳೆಯುವ ಬಗ್ಗೆ ನಾನು ಕೂಡ ಸಹಿ ಹಾಕಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಬಿ. ಸುರೇಶ್‌ಗೌಡರವರು ಸಹ ಹಾಕಿದ್ದಾರೆ. ಈ ಬಗ್ಗೆ ನನಗೆ ಗೊತ್ತಿಲ್ಲ. calling attention ಬಗ್ಗೆ ಈಗಲೇ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರು ಕರೆದರು. ಶ್ರೀ ಅರವಿಂದ ಲಿಂಬಾವಳಿಯವರು ಹಾಸನ ಜಿಲ್ಲಾ ಉಸ್ತುವಾರಿ ಸಚಿವರು ಐಸಿಸಿ ಮೀಟಿಂಗ್ ಅನ್ನು ಕರೆದರು. ಅವತ್ತಿನದಿವಸ ನಾವೆಲ್ಲರೂ ಕೂಡ ಅಲ್ಲಿಗೆ ಹೋಗಿದ್ದೆವು.

ಶ್ರೀ ಬಸವರಾಜ ಬೊಮ್ಮಾಯಿ : ಶೂನ್ಯವೇಳೆಯಲ್ಲಿ ಪೂರ್ಣ ಪ್ರಮಾಣದ ಚರ್ಚೆಗೆ ತೆಗೆಕೊಂಡಿದ್ದೀರಾ? ನಾನು ನಿಮ್ಮ ಸಹಾಯಕ್ಕಾಗಿ ಬರುತ್ತಿದ್ದೇನೆ. ಇದು ಗಮನಸೆಳೆಯುವ ಸೂಚನೆಯಲ್ಲಿ ಬಂದಿದೆ. ಅದರ ಬಗ್ಗೆ ಸಂಪೂರ್ಣವಾದಂತಹ ವಿವರವನ್ನು ನಾನು ಹೇಳುವುದಕ್ಕೆ ಅವಕಾಶವಿದೆ. ಶೂನ್ಯವೇಳೆಯಲ್ಲಿ ನಾನು ಸಂಪೂರ್ಣವಾಗಿ ಹೇಳುವುದಕ್ಕೆ ಅವಕಾಶವಿರುವುದಿಲ್ಲ. ಅದಕ್ಕಾಗಿ ಇವತ್ತೇ ಗಮನಸೆಳೆಯುವ ಸೂಚನೆಯಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.